**MVC No.278/2025**
**PW:1**

**ದಿಃ11.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜದಾರರ ಪರ ವಕೀಲರಿಂದಃ**

ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದಲ್ಲಿ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆಸಿರುವ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | |
|---|---|
| ನಿ.ಪಿ.01 | ಪ್ರಥಮ ವರ್ತಮಾನ ವರದಿಯ ದೃಡಿಕೃತ ನಕಲು |
| ನಿ.ಪಿ.02 | ಪ್ರಥಮ ವರ್ತಮಾನ ಮಾಹಿತಿಯ ದೃಡಿಕೃತ ನಕಲು |
| ನಿ.ಪಿ.03 | ಪಂಚನಾಮೆ ದೃಡಿಕೃತ ನಕಲು |
| ನಿ.ಪಿ.04 | ನಕ್ಷೇಯ ದೃಡಿಕೃತ ನಕಲು |
| ನಿ.ಪಿ.05 | ವಾಹನ ತಪಾಸಣೆ ವರದಿಯ ದೃಡಿಕೃತ ನಕಲು |
| ನಿ.ಪಿ.06 | ಗಾಯದ ಪ್ರಮಾಣ ಪತ್ರದ ದೃಡಿಕೃತ ನಕಲು |
| ನಿ.ಪಿ.07 | ವಾಹನ ತಡೆ ಪಂಚನಾಮೆಯ ದೃಡಿಕೃತ ನಕಲು |
| ನಿ.ಪಿ.08 | ಪಿರ್ಯಾದಿಯ ಪುನಃ ಹೇಳಿಕೆಯ ದೃಡಿಕೃತ ನಕಲು |
| ನಿ.ಪಿ.09 | ಅಂತಿಮ ವರದಿಯ ದೃಡಿಕೃತ ನಕಲು |
| ನಿ.ಪಿ.10 | ಡಿಸ್ಚಾರ್ಜ ಸಮರಿ |
| ನಿ.ಪಿ.11 | ಎರಡು ಸ್ಕಾನ ವರದಿ (ಒಟ್ಟಾಗಿ) |
| ನಿ.ಪಿ.12 | ವೈದ್ಯಕೀಯ ಬಿಲ್ಲುಗಳು (ಒಟ್ಟಾಗಿ) |
| ನಿ.ಪಿ.13 | ಮೂರು ಎಕ್ಸರೆಗಳು (ಒಟ್ಟಾಗಿ) |
| ನಿ.ಪಿ.14 | ಆಧಾರ ಕಾರ್ಡನ ನೋಟರಿಕೃತ ಪ್ರತಿ ಮೂಲ ದಾಖಲೆಯೊಂದಿಗೆ ಹೋಲಿಕೆ ಮಾಡಿ. |

ಈ ಕಾರಣಗಳಿಂದಾಗಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ 02 ನೇ ಎದುರುದಾರರ ಪರ ವಕೀಲರಿಂದಃ</u>**

ನಾನು 10 ನೇ ತರಗತಿ ವರೆಗೆ ಓದಿದ್ದು, 10 ನೇ ತರಗತಿ ಮುಗಿಸಿರುವುದಿಲ್ಲ. ನಾನು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ

ಮಾಹಿತಿ ಇರುತ್ತದೆ. ಮೋಟರಸೈಕಲ್ ನಂ. ಕೆಎ 29 ಜೆ 5616 ರ ಮಾಲೀಕ ನಾನೇ ಅಂದರೆ ಸರಿ. ಅಪಘಾತ ಕಾಲಕ್ಕೆ ಸದರಿ ಮೋಟರಸೈಕಲ್ ನ್ನು ನಾನೇ ಚಾಲನೆ ಮಾಡುತ್ತಿದ್ದೆ ಎಂದರೆ ಸರಿ. ಆ ದಿನ ನಾವು 03 ಜನ ಮೋಟರಸೈಕಲ್ ನಲ್ಲಿ ಪ್ರಯಾಣಿಸುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಹೆಲ್ಮೆಟ್ ಧರಿಸದೆ ಮೋಟರಸೈಕಲ್ ನ್ನು ಚಾಲನೆಮಾಡುತ್ತಿದ್ದೆ ಎಂದರೆ ಸರಿ. ಅಪಘಾತ ಕಾಲಕ್ಕೆ ನನ್ನ ಮೋಟರಸೈಕಲ್ ಗೆ ವಿಮೆ ಇರಲಿಲ್ಲ ಅಂದರೆ ಸರಿ. ವಿಮೆ ಇಲ್ಲದ ವಾಹನವನ್ನು ಚಾಲನೆ ಮಾಡಿದ್ದಕ್ಕಾಗಿ ಪೋಲೀಸರು ನನ್ನ ವಿರುದ್ದವು ಅಂತಿಮ ವರದಿ ಸಲ್ಲಿಸಿರುತ್ತಾರೆ ಅಂದರೆ ಸರಿ. ನನ್ನ ಮೋಟರಸೈಕಲ್ ಹಾಗೂ ಮೋಟರಸೈಕಲ್ ನಂ. ಕೆಎ 29 ಇಡಿ 2145 ಗಳು ಮುಖಾಮುಖಿ ಆಗಿ ಡಿಕ್ಕಿ ಹೊಡೆದಿದ್ದರಿಂದ ನನಗೆ ಗಾಯಗಳಾಗಿರುತ್ತವೆ ಅಂದರೆ ಸರಿಯಲ್ಲ. ಮೋಟರಸೈಕಲ್ ನಂ. ಕೆಎ 29 ಇಡಿ 2145 ರ ಚಾಲಕನಿಗೆ ಡಿ ಎಲ್ ಇಲ್ಲದಿದ್ದು, ನನ್ನ ಮೋಟರಸೈಕಲ್ ಗೆ ವಿಮೆ ಇಲ್ಲದಿದ್ದು ಪರಿಹಾರ ಪಡೆಯುವ ಉದ್ದೇಶದಿಂದ ಕೆ ಎ 02 ಎಂಯು 5675 ಕಾರ್ ಅಪಘಾತದಲ್ಲಿ ಭಾಗಿ ಆಗದೆ ಇದ್ದರೂ ಕಾರ್ ಚಾಲಕನ ವಿರುದ್ದ ಸುಳ್ಳು ದೂರು ನೀಡಿರುತ್ತೇವೆ ಅಂದರೆ ಸರಿಯಲ್ಲ. ಅಪಘಾತವೂ ನನ್ನ ಹಾಗೂ ಮೋಟರಸೈಕಲ್ ನಂ. ಕೆಎ 29 ಇಡಿ 2145 ರ ಚಾಲಕನ ಸಂಪೂರ್ಣ ನಿಷಕಾಳಜಿತನ ದಿಂದ ಆಗಿರುತ್ತದೆ ಎಂದರೆ ಸರಿಯಲ್ಲ.

ನಾನು ಟ್ರಾಕಟರ್ ಮೇಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಾಕ್ಷ್ಯ

ಪ್ರಮಾಣ ಪತ್ರದಲ್ಲಿ ನಾನು Driver ಮತ್ತು ಮೇಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೆ ಎಂದು ಬರೆಸಿರುತ್ತೇನೆ ಅಂದರೆ ಸರಿಯಲ್ಲ. ನನಗೆ ತಿಂಗಳಿಗೆ ರೂ.19,000/- ಆದಾಯ ವಿತ್ತು ಎಂದು ತೋಗಿಸಲು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಅಂದರೆ ಖಾಸಗಿ ಕೆಲಸ ವಾಗಿದ್ದರಿಂದ ಯಾವುದೇ ದಾಖಲೆ ಇರುವುದಿಲ್ಲ. ಅಪಘಾತ ಕಾಲಕ್ಕೆ ನನಗೆ 45 ವರ್ಷಕ್ಕೂ ಹೆಚ್ಚು ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ನನಗೆ ಎಷ್ಟು ವಯಸ್ಸಾಗಿತ್ತು ಎನ್ನುವ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಚಿಕಿತ್ಸೆಗೆ ರೂ.50,000/- ಖರ್ಚು ಆದ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಳವಡಿಕೆಗಳನ್ನು ತೆಗೆಸಲು ನನಗೆ ರೂ. 01 ಲಕ್ಷ ಬೇಕಾಗುತ್ತದೆ ಎಂದು ತೋರಿಸಲು ಯಾವುದೇ ಪೂರಕ ದಾಖಲೆಗಳನ್ನು ಹಾಜರು ಪಡಿಸಿಲ್ಲ ಅಂದರೆ ಸರಿ. ನನ್ನ ಅನುಕೂಲಕ್ಕೆ ತಕ್ಕಂತೆ ವೈದ್ಯವಿಕೀಯ ಬಿಲ್ಲುಗಳನ್ನು ಮತ್ತು ಇತರೆ ದಾಖಲೆಗಳನ್ನು ಖೋಟ್ಟಿಯಾಗಿ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರುವಿಚಾರಣೆಃ - ಇರುವುದಿಲ್ಲ.</u>**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

3 ನೇ  ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.